Vijayapura

**INDIA NON JUDICIAL**

सत्यमेव जयते

## Government of Karnataka

**e-Stamp**

| | | |
|---|---|---|
| Certificate No. | : | IN-KA91203659543269R |
| Certificate Issued Date | : | 11-Apr-2019 02:06 PM |
| Account Reference | : | NONACC (FI)/ kaksfcl08/ BIJAPUR16/ KA-BJ |
| Unique Doc. Reference | : | SUBIN-KAKAKSFCL0812701949566922R |
| Purchased by | : | PRINCIPAL BLDEAS J S S COLLEGE OF EDUCATION |
| Description of Document | : | Article 12 Bond |
| Description | : | BOND |
| Consideration Price (Rs.) | : | 0 (Zero) |
| First Party | : | PRINCIPAL BLDEAS J S S COLLEGE OF EDUCATION |
| Second Party | : | REGISTRAR KSOU MYSORE 04 |
| Stamp Duty Paid By | : | PRINCIPAL BLDEAS J S S COLLEGE OF EDUCATION |
| Stamp Duty Amount(Rs.) | : | 500 (Five Hundred only) |

Authorised Signatory
Siddhasiri Souharda
Sahakari ... VIJAYAPUR

RS 500

Please write or type below this line

ಒಡಂಬಡಿಕೆ ಪತ್ರ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು

ಮತ್ತು

ಬಿ.ಎಲ್.ಡಿ.ಇ ಸಂಸ್ಥೆಯ ಜೆ.ಎಸ್.ಎಸ್.ಶಿಕ್ಷಣ ಮಹಾವಿದ್ಯಾಲಯ,

ಸ್ನಾತಕೋತ್ತರ ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ವಿಜಯಪುರ ನಲ್ಲಿರುವ

ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರದ ಕಾಲೇಜು ನಡುವಿನ ಒಡಂಬಡಿಕೆ

ಈ ದಿನ ಅಂದರೆ ದಿನಾಂಕ : 10/04/2019 ( ಎಪ್ರೀಲ್ ಹತ್ತು ಎರಡಸಾವಿರದಾಹತ್ತೊಂಬತ್ತು)
ರಂದು ಈ ಮೇಲಿನ ಎರಡೂ ಸಂಸ್ಥೆಗಳು ಮುಂದಿನ ನಿಯಮ ಮತ್ತು ನಿಬಂಧನೆಗಳನ್ನು ಒಪ್ಪಿ
ಈ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತವೆ.

Principal
B.L.D.E.A's J.S.S College of Education
Vijayapur

IQAC Co-ordinator
B.L.D.E.A's JSS College of Education
Vijayapur

**Statutory Alert:**

1. The authenticity of this Stamp Certificate should be verified at "www.shcilestamp.com". Any discrepancy in the details on this Certificate and as available on the website renders it invalid.
2. The onus of checking the legitimacy is on the users of the certificate.
3. In case of any discrepancy please inform the Competent Authority

'ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರ' (ಅಧ್ಯಯನ ಕೇಂದ್ರ) ವಾಗಿರುವ ಹೊರಗಿನ
ಬಿ.ಇಡಿ ಸಂಸ್ಥೆ / ಕಾಲೇಜಿನ ಜವಾಬ್ದಾರಿಗಳು :

1. ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರ (ಅಧ್ಯಯನ ಕೇಂದ್ರ) ವಾಗಿ ಆದೇಶ ನೀಡಿದ ದಿನಾಂಕದಿಂದ ಕರಾಮುವಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಸೂಚನೆ ಹಾಗೂ ನಿರ್ದೇಶನದಂತೆ ಕಾರ್ಯಕ್ರಮ ಕೈಗೊಳ್ಳುವುದು.
2. 'ಕರಾಮುವಿ ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರ'ದ (ಬಿ.ಇಡಿ ಅಧ್ಯಯನ ಕೇಂದ್ರದ ') ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳ ಪೂರೈಕೆಗಾಗಿ ತಮ್ಮ ಕಾಲೇಜಿನ ಬೋಧಕರ ಸೇವೆಯನ್ನು ಮತ್ತು ಮೂಲಭೂತ ಸೌಕರ್ಯವನ್ನು ಒದಗಿಸಿಕೊಡುವುದು.
3. ಎನ್.ಸಿ.ಟಿ.ಇ ನಿಯಮಾವಳಿ ಪ್ರಕಾರ ಬಿ.ಇಡಿ ಸಂಪರ್ಕ ಕಾರ್ಯಕ್ರಮವು ಕಡ್ಡಾಯವಾಗಿರುತ್ತದೆ' ಹಾಗೂ' ಶೇ.80 ರಷ್ಟು ಹಾಜರಾತಿ ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಪೂರ್ವಾನುಮತಿ/ಅನುಮತಿ ಇಲ್ಲದೆ, ವಿದ್ಯಾರ್ಥಿಗಳಿಗೆ ಯಾವುದೇ ತರಹದ ರಿಯಾಯಿತಿ ನೀಡುವಲ್ಲಿ ವಿಶ್ವವಿದ್ಯಾನಿಲಯದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.
4. ಕರಾಮುವಿ ಪರವಾಗಿ ಯಾವುದೇ ಹಣಕಾಸು, ಋಣಭಾರಗಳನ್ನು ಹೊಂದುವಂತಿಲ್ಲ.
5. ಕರಾಮುವಿಯ ಪರವಾಗಿ 'ಬಿ.ಇಡಿ ಕಾರ್ಯಕ್ರಮ'ವನ್ನು ಹೊರತುಪಡಿಸಿ ಯಾವುದೇ ನೌಕರರು, ಸಿಬ್ಬಂದಿಗಳಿಗೆ ಕಾನೂನಾತ್ಮಕ ಹಾಗೂ ಹಣಕಾಸಿನ ಜವಾಬ್ದಾರಿಯನ್ನು ನೀಡುವಂತಿಲ್ಲ.
6. ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರವು 'ಯು.ಜಿ.ಸಿ 2017 ಮುಕ್ತ ಮತ್ತು ದೂರಶಿಕ್ಷಣ ನೂತನ ನಿಯಮಗಳಂತೆ' ಸ್ಥಾಪನೆಯಾಗಿದ್ದು, ವಿಶ್ವವಿದ್ಯಾನಿಲಯವು ಸದರಿ ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರವಾದ ನಿಮ್ಮ ಕಾಲೇಜನ್ನು ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸಿಕೊಳ್ಳಲು ಉದ್ದೇಶಿಸಿರುವುದರಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಮಾತ್ರ ನಡೆಸುವುದು.
7. ವಿಶ್ವವಿದ್ಯಾನಿಲಯವು ನೀಡುವ ಸೂಚನೆ – ನಿರ್ದೇಶನಗಳ ಅನುಸಾರ ಕಾರ್ಯನಿರ್ವಹಿಸುವುದು.
8. ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರವು ಪ್ರತಿ ವರ್ಷ 50 ಬಿ.ಇಡಿ ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ನಡೆಸುವುದು.
9. ವಿಶ್ವವಿದ್ಯಾನಿಲಯದ ಬಿ.ಇಡಿ ಪಠ್ಯಕ್ರಮದಂತೆ ಸಂಪರ್ಕ ಕಾರ್ಯಕ್ರಮಗಳು, (I,II,III) ಅಭ್ಯಾಸ ಬೋಧನೆ (ಇಂಟರ್ನ್‌ಶಿಪ್), ವಾರಾಂತ್ಯ ಸಮಾಲೋಚನೆ, ಪ್ರಾಯೋಗಿಕ ಪರೀಕ್ಷೆ ನಡೆಸುವುದು. ಹಾಗೂ ಈ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ವರದಿ ಸಲ್ಲಿಸುವುದು.
10. ಆಂತರಿಕ ಹಾಗೂ ನಿರಂತರ ಮೌಲ್ಯಮಾಪನ ನಡೆಸಿಕೊಡುವುದು. ಅದಕ್ಕೆ ಸಂಬಂಧಪಟ್ಟ ಮಾರ್ಕ್ಸ್ ಲಿಸ್ಟ್ ಅನ್ನು ಸಿದ್ಧಪಡಿಸಿ, ದೃಢೀಕರಿಸಿ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿಕೊಡುವುದು.
11. ಆಂತರಿಕ ಅಂಕಗಳನ್ನು ನಿಗದಿತ ಸಮಯದೊಳಗೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ದಿನಾಂಕದೊಳಗೆ ಕಳುಹಿಸಿಕೊಡುವುದು.
12. ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಬಿ.ಇಡಿ ಶೈಕ್ಷಣಿಕ ಕಾರ್ಯಕ್ರಮಗಳಿಗೆ ನಿಯುಕ್ತಿಗೊಳಿಸಿರುವ ಬೋಧಕರ/ಬೋಧಕೇತರ ಸಿಬ್ಬಂದಿಗಳ ಪಟ್ಟಿಯನ್ನು ಅನುಮೋದಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಜವಾಬ್ದಾರಿಗಳು :

1. 'ಕರಾಮುವಿ ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರ' (ಬಿ.ಇಡಿ ಅಧ್ಯಯನ ಕೇಂದ್ರದ)ಗಳಿಗೆ ನಿಯುಕ್ತಿಗೊಳಿಸಿರುವ ಸಂಯೋಜನಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಗಳಿಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಸಂಭಾವನೆ / ಗೌರವಧನ ನೀಡಲಾಗುವುದು.
2. ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರಕ್ಕೆ ನಿಯುಕ್ತಿಗೊಳಿಸಿರುವ ಸಂಯೋಜನಾಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ವಿವಿಧ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಿದ್ದಾಗ ನಿಯೋಜಿಸಬಹುದು.
3. ಬಿ.ಇಡಿ ಸಂಪರ್ಕ ಕಾರ್ಯಕ್ರಮಗಳಲ್ಲಿ ಸಮಾಲೋಚಕರಾಗಿ ಭಾಗವಹಿಸುವ ಅಧ್ಯಾಪಕರುಗಳಿಗೆ ವಿವಿನಿಯಮಾನುಸಾರ ಸಂಭಾವನೆ ಮತ್ತು ಭತ್ಯೆಗಳನ್ನು ನೀಡಲಾಗುವುದು .
4. ಸಂಪರ್ಕ ಕಾರ್ಯಕ್ರಮಗಳು ಮುಗಿದ ನಂತರ ಸಂಭಾವನೆ ಪಾವತಿಸಲು ಕ್ರಮಕೈಗೊಳ್ಳುವುದು.
5. ಆಂತರಿಕ ನಿಬಂಧಗಳಿಗೆ ಸಂಬಂಧಿಸಿದಂತೆ ಬಿ.ಇಡಿ ವಿದ್ಯಾರ್ಥಿಗಳಿಗೆ ಆಗಿಂದ್ದಾಗ್ಗೆ ಮಾಹಿತಿ ನೀಡುವುದು.
6. ಪ್ರವೇಶಾತಿ, ಪುನರ್ ಪ್ರವೇಶಾತಿ, ಪರೀಕ್ಷೆಗಳ ' ಬಗ್ಗೆ ಅಧ್ಯಯನ ಕೇಂದ್ರಕ್ಕೆ ಮಾಹಿತಿ ಒದಗಿಸುವುದು ಅಧ್ಯಯನ ಕೇಂದ್ರಗಳನ್ನು ಪರೀಕ್ಷಾ ಕೇಂದ್ರವನ್ನಾಗಿ ರೂಪಿಸುವುದು.
7. ವಿದ್ಯಾರ್ಥಿಗಳಿಗೆ' ಸಂಬಂಧಿಸಿದ ಮಾಹಿತಿಗಳನ್ನು ಪರೀಕ್ಷಾ ಫಲಿತಾಂಶ ಕೇಂದ್ರಗಳಿಗೆ ನೀಡುವದು .
8. ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರದ ಸಂಯೋಜನಾಧಿಕಾರಿಗಳು, ಶೈಕ್ಷಣಿಕ ಸಮಾಲೋಚಕರನ್ನು,ಪರೀಕ್ಷಾ ಕಾರ್ಯಕ್ಕಾಗಿ ನಿಯೋಜಿಸಿಕೊಳ್ಳುವುದು. ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು. ಸದರಿಯವರು ವಿವಿ ನಿಯಮದಂತೆ ಸಂಭಾವನೆ ಮತ್ತು ಭತ್ಯೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.
9. ವಿಶ್ವವಿದ್ಯಾನಿಲಯವು ಒದಗಿಸುವ ಯಾವುದೇ ಸಂಪನ್ಮೂಲ, ಪರಿಕರ, ಇತ್ಯಾದಿಗಳ ಬಗ್ಗೆ ಲೆಕ್ಕ ಪರಿಶೋಧನೆ (ಆಡಿಟ್) ನಡೆಸುವುದು.
10. ಯಾವುದೇ ಸಂಭಾವನೆ ಹುಂಡಿಗಳನ್ನು ಪರಿಶೀಲಿಸಿ, ವಿಭಾಗದ ಅಧ್ಯಕ್ಷರು / ಮೇಲಧಿಕಾರಿಗಳಿಂದ ದೃಢೀಕರಿಸಿ ವಿವಿ ನಿಯಮಾನುಸಾರ ಪಾವತಿಸಲು ಹಣಕಾಸು ವಿಭಾಗಕ್ಕೆ ಸಂಬಂಧಪಟ್ಟ ಕಾರ್ಯನಿರ್ವಾಹಕರು ಸಲ್ಲಿಸುವುದು.

ಒಡಂಬಡಿಕೆಯ ಅವಧಿ :

- ಆದೇಶಿತ ಶೈಕ್ಷಣಿಕ ಸಾಲಿನಿಂದ (2018–19) ನಾಲ್ಕು ಮಂಜೂರಿಳವರೆಗೆ ಒಡಂಬಡಿಕೆ ಚಾಲ್ತಿಯಲ್ಲಿರುತ್ತದೆ.
- ಒಡಂಬಡಿಕೆ ಮುಂದುವರಿಕೆಯು ಅಧ್ಯಯನ ಕೇಂದ್ರದ ಶೈಕ್ಷಣಿಕ ಗುಣಮಟ್ಟ ಅವಲಂಬಿತವಾಗಿರುತ್ತದೆ.
- ಕರಾಮುವಿ ಹಾಗೂ ಯುಜಿಸಿಯ ಯಾವುದೇ ನಿಯಮಾವಳಿಗಳ ಉಲ್ಲಂಘನೆಯು, ಸದರಿ ಅವಧಿಯ ಒಡಂಬಡಿಕೆ ರದ್ದುಗೊಳಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

| | |
|---|---|
| ಕರಾಮುವಿ ಬಿ.ಇಡಿ ಕಲಿಕಾರ್ಥಿ ಸಹಾಯ ಕೇಂದ್ರದ ಕಾಲೇಜಿನ ಪರವಾಗಿ | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರವಾಗಿ |
| ಪ್ರಾಚಾರ್ಯರು<br>ಬಿ. ಎಲ್ ಡಿ. ಇ. ಸಂಸ್ಥೆಯ,<br>ಜಗದ್ಗುರು ಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ<br>ಶಿಕ್ಷಣ [ಮಹಾವಿದ್ಯಾಲಯ, ವಿಜಯಪುರ]<br>ಬಿ.ಇಡಿ ಕಾಲೇಜಿನ ಮೊಹರಿನೊಂದಿಗೆ | [ಕುಲಸಚಿವರು, ಕುಲಸಚಿವರ ಹೆಸರು<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ<br>ಮುಕ್ತಗಂಗೋತ್ರಿ, ಮೈಸೂರು ೫೭೦ ೦೦೬. |
| ದಿನಾಂಕ : 10.4.2019<br>ಸ್ಥಳ : ವಿಜಯಪುರ | ದಿನಾಂಕ : 12.06.2019<br>ಸ್ಥಳ : ಮೈಸೂರು |

IQAC Co-ordinartor
BLDEA's JSS College of Education
Vijayapur

Principal,
J.S.S. College of Education
VIJAYAPUR.